**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 438/2013

CW - 8 PW - 4

| | | |
|---|---|---|
| ಹೆಸರು | ಃ | ಮಂಜು |
| ತಂದೆಯ ಹೆಸರು | ಃ | ಸೋಮೇಗೌಡ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಮಕಳಂದ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 23.11.2023

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ-1 ರಿಂದ 7 ಗೊತ್ತಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 13.05.2012 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಸಾತನೂರು ಪೋಲಿಸರು ಆರೋಪಿತರ ಮನೆಯ ಮೇಲೆ ದಾಳಿ ನಡೆಸಿ 1 ನೇ ಆರೋಪಿಯ ಮನೆಯಿಂದ ಒಂದು ನಾಡ ಬಂದೂಕು, 2 ನೇ ಆರೋಪಿಯ ಮನೆಯಿಂದ ಒಂದು ನಾಡ ಬಂದೂಕು ಮತ್ತು ಮುರಿದು ಹೋಗಿರುವ ನಳಿಕೆ ಇಲ್ಲದ ಮತ್ತೊಂದು ನಾಡ ಬಂದೂಕು ಹಾಗೂ 3 ನೇ ಆರೋಪಿಯ ಮನೆಯಿಂದ ಒಂದು ನಾಡ ಬಂದೂಕು, 4 ನೇ ಆರೋಪಿಯ ಮನೆಯಿಂದ ಒಂದು ನಾಡ ಬಂದೂಕನ್ನು ಯಾವುದೇ ಲೈಸನ್ಸ್ ಇಲ್ಲದೇ ಮನೆಯಲ್ಲಿ ಅಕ್ರಮವಾಗಿ ಇಟ್ಟುಕೊಂಡ ಕಾರಣ ಅಮಾನತ್ತು ಪಡಿಸಿಕೊಂಡು 1 ರಿಂದ 3 ನೇ ಆರೋಪಿತರನ್ನು ಜೊತೆಯಲ್ಲಿ ಕರೆದುಕೊಂಡು ಹೋದರು ಎಂದು ನನಗೆ ಗ್ರಾಮ ದಲ್ಲಿ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

ಆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ.  ವಕೀಲರಿಂದಃ**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ  ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ